**All India Radio: Bangalore**
**National Bulletin In Kannada**
**09.07.2026 07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**09.07.2026 07.35 a.m.**

**<><><><>**

ಮುಖ್ಯಾಂಶಗಳು

1. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಇಂದು ಭುವನೇಶ್ವರಕ್ಕೆ ಭೇಟಿ ; ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ
2. ಪ್ರಧಾನಿ ಮೋದಿ- ಆಸ್ಟ್ರೇಲಿಯಾ ಪ್ರಧಾನಿ ಇಂದು ದ್ವಿಪಕ್ಷೀಯ ಮಾತುಕತೆ
3. ಭಾರತ ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುಂದುವರಿಕೆ: ಐಎಂಎಫ್
4. ತಮಿಳುನಾಡಿನಲ್ಲಿ ಕೊಪ್ರಾ ಹಾಗೂ ತೋತಾಪುರಿ ಮಾವು ಖರೀದಿಗೆ ಕೇಂದ್ರ ಸರ್ಕಾರ ಅನುಮೋದನೆ
5. ಗಗನಯಾನ ಮಿಷನ್‌ಗೆ ಪ್ರಮುಖ ಪ್ಯಾರಾಚೂಟ್ ಪರೀಕ್ಷೆಯಲ್ಲಿ ಇಸ್ರೋ ಯಶಸ್ಸು
6. ವಿಂಬಲ್ಡನ್ ಜೂನಿಯರ್ಸ್-೨೦೨೬ ; ೩೬ ವರ್ಷಗಳ ಬಳಿಕ ಬಾಲಕರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಭಾರತದ ಅರ್ನವ್ ಪಾಪರ್ಕರ್

<><><><>

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಇಂದು ಒಡಿಶಾದ ರಾಜಧಾನಿ ಭುವನೇಶ್ವರಕ್ಕೆ ಭೇಟಿ ನೀಡಲಿದ್ದಾರೆ.

ಉಪರಾಷ್ಟ್ರಪತಿಗಳು ಭುವನೇಶ್ವರದ ಒಡಿಶಾ ಕೃಷಿ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿರುವ, ಆಳ ಸಮುದ್ರದಲ್ಲಿ ಸುಸ್ಥಿರ ಮೀನುಗಾರಿಕೆಗೆ ಅಧಿಕೃತ ಪತ್ರಗಳನ್ನು ವಿತರಿಸುವ ರಾಷ್ಟ್ರೀಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಅವರು 'ಒಡಿಶಾ ಆಳ ಸಮುದ್ರ ಮೀನುಗಾರಿಕೆ ಮಿಷನ್' ದಾಖಲೆಯನ್ನು ಬಿಡುಗಡೆ ಮಾಡಲಿದ್ದಾರೆ. ಬಳಿಕ, ಉಪರಾಷ್ಟ್ರಪತಿಗಳು ಖೋರ್ಧಾದಲ್ಲಿರುವ ರಾಷ್ಟ್ರೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ೧೫ನೇ ಪದವಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

<><><><>

ವಿಶ್ವದ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಭಾರತ ತನ್ನ ಸ್ಥಾನವನ್ನು ಮುಂದುವರಿಸಿದೆ. ಪ್ರಸಕ್ತ ವರ್ಷದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ದರ ಶೇಕಡಾ ೭ ರಷ್ಟಿರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ಅಂದಾಜಿಸಿದೆ. ಐಎಂಎಫ್‌ನ ದ್ವೈವಾರ್ಷಿಕ ವಿಶ್ವ ಆರ್ಥಿಕ ದೃಷ್ಟಿಕೋನ ಪರಿಷ್ಕರಣೆ ವರದಿಯ ಪ್ರಕಾರ, ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನ ಬೆಳವಣಿಗೆ ದರ ಶೇಕಡಾ ೬.೪ಕ್ಕೆ ಇಳಿಕೆಯಾಗುವ ಸಾಧ್ಯತೆಯಿದೆ. ಖಾಸಗಿ ಬಳಕೆ ಮತ್ತು ಸೇವಾ ಕ್ಷೇತ್ರದಲ್ಲಿನ ಬಲಿಷ್ಠ ಚಟುವಟಿಕೆಗಳು ಭಾರತದ ಆರ್ಥಿಕ ಬೆಳವಣಿಗೆಗೆ ಪ್ರಮುಖ ಬೆಂಬಲವಾಗಿವೆ ಎಂದು ವರದಿ ತಿಳಿಸಿದೆ. ಜಾಗತಿಕ ಆರ್ಥಿಕತೆಯ ಬೆಳವಣಿಗೆ ದರ ಈ ವರ್ಷ ಶೇಕಡಾ ೩ರಷ್ಟಿರಲಿದೆ ಎಂದು ವರದಿ ಅಂದಾಜಿಸಿದ್ದು, ಭಾರತದ ಬೆಳವಣಿಗೆ ದರವು ಜಾಗತಿಕ ಸರಾಸರಿಗಿಂತ ಎರಡು ಪಟ್ಟು ಹೆಚ್ಚಾಗಿದೆ. ಮುಂದಿನ ವರ್ಷ ಜಾಗತಿಕ ಆರ್ಥಿಕ ಬೆಳವಣಿಗೆ ದರ ಶೇಕಡಾ ೩.೪ಕ್ಕೆ ಏರಿಕೆಯಾಗುವ ನಿರೀಕ್ಷೆಯಿದೆ. ವಿಶ್ವದ ಎರಡನೇ ಅತಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿರುವ ಚೀನಾದ ಬೆಳವಣಿಗೆ ದರ ಈ ವರ್ಷ ಶೇಕಡಾ ೪.೬ರಷ್ಟಿರಲಿದ್ದು, ಮುಂದಿನ ವರ್ಷ ಅದು ಶೇಕಡಾ ೪.೧ಕ್ಕೆ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ವರದಿ ತಿಳಿಸಿದೆ. ಅಮೆರಿಕದ ಆರ್ಥಿಕ ಬೆಳವಣಿಗೆ ದರ ಈ ವರ್ಷ ಶೇಕಡಾ ೨.೩ ಮತ್ತು ಮುಂದಿನ ವರ್ಷ ಶೇಕಡಾ ೨.೨ರಷ್ಟಿರಲಿದೆ ಎಂದು ಐಎಂಎಫ್ ಅಂದಾಜಿಸಿದೆ.

<><><><>

ಪ್ರಧಾನಿ ನರೇಂದ್ರ ಮೋದಿ ಅವರು ಇಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೊಂದಿಗೆ ಮೆಲ್ಬೋರ್ನ್‌ನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಉಭಯ ದೇಶಗಳ ನಡುವಿನ ವ್ಯಾಪಾರ, ರಕ್ಷಣೆ, ಮಹತ್ವದ ತಂತ್ರಜ್ಞಾನ, ಶಿಕ್ಷಣ ಹಾಗೂ ಜನರಿಂದ ಜನರ ನಡುವಿನ ಸಂಪರ್ಕ ವೃದ್ಧಿ ಕುರಿತು ಮಾತುಕತೆ ನಡೆಯುವ ನಿರೀಕ್ಷೆಯಿದೆ. ಈ ಭೇಟಿ ಭಾರತ-ಆಸ್ಟ್ರೇಲಿಯಾ ಸಮಗ್ರ ಕಾರ್ಯತಂತ್ರದ ಸಹಭಾಗಿತ್ವಕ್ಕೆ ಮತ್ತಷ್ಟು ಉತ್ತೇಜನ ನೀಡಲಿದೆ. ಪ್ರಧಾನಿ ಮೋದಿ ಭಾರತ-ಆಸ್ಟ್ರೇಲಿಯಾ ಸಿಇಒಗಳ ವೇದಿಕೆಯಲ್ಲಿ ಪಾಲ್ಗೊಂಡು ಉಭಯ ದೇಶಗಳ ಉದ್ಯಮಿಗಳನ್ನೂ ಉದ್ದೇಶಿಸಿ ಮಾತನಾಡಲಿದ್ದಾರೆ. ಅಲ್ಲದೆ, ಮೆಲ್ಬೋರ್ನ್‌ನಲ್ಲಿ ಭಾರತೀಯ ಸಮುದಾಯದ ಸದಸ್ಯರೊಂದಿಗೂ ಸಂವಾದ ನಡೆಸಲಿದ್ದಾರೆ.

<><><><>

ತಮಿಳುನಾಡಿನ ರೈತರ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಕೊಪ್ರಾ ಮತ್ತು ತೋತಾಪುರಿ ಮಾವಿನ ಖರೀದಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಈ ಕುರಿತು ಮಾಹಿತಿ ನೀಡಿದ್ದು, ಮಾರುಕಟ್ಟೆ ಬೆಲೆಯ ಏರಿಳಿತದಿಂದ ರೈತರು ನಷ್ಟಕ್ಕೆ ಒಳಗಾಗದಂತೆ ತಡೆಯುವುದು ಹಾಗೂ ಅವರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರೆಯುವಂತೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ತಮಿಳುನಾಡು ಸರ್ಕಾರದ ಪ್ರಸ್ತಾವನೆಯ ಆಧಾರದ ಮೇಲೆ ಈ ಅನುಮೋದನೆ ನೀಡಲಾಗಿದೆ. ಇದರಡಿ ರಾಜ್ಯದಲ್ಲಿ ೮೭ ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ಕೊಪ್ರಾ ಖರೀದಿಸಲಾಗುವುದು. ಇದರಲ್ಲಿ ೮೭ ಸಾವಿರ ಮೆಟ್ರಿಕ್ ಟನ್ ಮಿಲ್ಲಿಂಗ್ ಕೊಪ್ರಾ ಹಾಗೂ ೨೨೬ ಮೆಟ್ರಿಕ್ ಟನ್ ಬಾಲ್ ಕೊಪ್ರಾ ಸೇರಿವೆ. ಸಂಪೂರ್ಣ ಖರೀದಿಯನ್ನು ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಕೈಗೊಳ್ಳಲಾಗುವುದು. ಇದಕ್ಕಾಗಿ ೧ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ಎಂಎಸ್‌ಪಿ ಮೌಲ್ಯವನ್ನು ಅನುಮೋದಿಸಲಾಗಿದೆ. ಇದೇ ವೇಳೆ, ಈ ವರ್ಷ ತಮಿಳುನಾಡಿನಲ್ಲಿ ೯೬ ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ತೋತಾಪುರಿ ಮಾವಿನ ಖರೀದಿಗೂ ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ ಅಡಿಯಲ್ಲಿ ಅನುಮೋದನೆ ನೀಡಲಾಗಿದೆ. ಈ ಯೋಜನೆಯಡಿ ಪ್ರತಿ ಕ್ವಿಂಟಲ್‌ಗೆ ೧ ಸಾವಿರ ರೂಪಾಯಿಗೂ ಅಧಿಕ ಮಾರುಕಟ್ಟೆ ಮಧ್ಯಸ್ಥಿಕೆ ಬೆಲೆಯನ್ನು ನಿಗದಿಪಡಿಸಲಾಗಿದೆ. ಮಾರುಕಟ್ಟೆ ಬೆಲೆ ಹಠಾತ್ ಕುಸಿತಗೊಂಡಾಗ ರೈತರು ನಷ್ಟಕ್ಕೆ ಉತ್ಪನ್ನಗಳನ್ನು ಮಾರಾಟ ಮಾಡಬೇಕಾದ ಪರಿಸ್ಥಿತಿ ಎದುರಾಗದಂತೆ ತಡೆಯುವುದು ಹಾಗೂ ಅವರಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆ ದೊರೆಯುವಂತೆ ಮಾಡುವುದು ಇದರ ಉದ್ದೇಶವಾಗಿದೆ.

<><><><>

ಗಗನಯಾನ ಮಿಷನ್‌ಗಾಗಿ ಅತ್ಯಂತ ಮಹತ್ವದ ಇಂಟಿಗ್ರೇಟೆಡ್ ಮೇನ್ ಪ್ಯಾರಾಚೂಟ್ ಏರ್‌ಡ್ರಾಪ್ ಟೆಸ್ಟ್ ಅನ್ನು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ - ಇಸ್ರೋ ಯಶಸ್ವಿಯಾಗಿ ನಡೆಸಿದೆ. ಮಧ್ಯಪ್ರದೇಶದ ಶಿಯೋಪುರದಲ್ಲಿರುವ ಏರಿಯಲ್ ಡೆಲಿವರಿ ರಿಸರ್ಚ್ ಆಂಡ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್‌ನ ಪರೀಕ್ಷಾ ವಲಯದಲ್ಲಿ ಈ ಪರೀಕ್ಷೆ ನಡೆಸಲಾಯಿತು. ಮೊದಲ ಮಾನವರಹಿತ ಗಗನಯಾನ ಜಿ೧ ಮಿಷನ್‌ನಲ್ಲಿ ನಿರೀಕ್ಷಿತ ಗರಿಷ್ಠ ಭಾರದ ಪರಿಸ್ಥಿತಿಯಲ್ಲೂ ಮುಖ್ಯ ಪ್ಯಾರಾಚೂಟ್‌ನ ರಚನಾತ್ಮಕ ಸಾಮರ್ಥ್ಯ ಹಾಗೂ ವಿನ್ಯಾಸದ

ವಿಶ್ವಾಸಾರ್ಹತೆಯನ್ನು ದೃಢೀಕರಿಸುವುದು ಈ ಪರೀಕ್ಷೆಯ ಉದ್ದೇಶವಾಗಿತ್ತು ಎಂದು ಇಸ್ರೋ ತಿಳಿಸಿದೆ. ಗಗನಯಾನ ಮಿಷನ್‌ಗಾಗಿ ಮುಖ್ಯ ಪ್ಯಾರಾಚೂಟ್‌ನ ಅರ್ಹತೆ ಪರಿಶೀಲಿಸಲು ನಡೆಸುತ್ತಿರುವ ಐಮ್ಯಾಟ್ ಪರೀಕ್ಷೆಗಳ ಸರಣಿಯಲ್ಲಿ ಇದು ಐದನೇ ಪರೀಕ್ಷೆಯಾಗಿದೆ. ಐಮ್ಯಾಟ್ ೦೫ ರ ಯಶಸ್ಸಿನಿಂದ ಮೊದಲ ಮಾನವರಹಿತ ಗಗನಯಾನ ಜಿ೧ ಮಿಷನ್‌ಗೆ ಮುಖ್ಯ ಪ್ಯಾರಾಚೂಟ್ ವ್ಯವಸ್ಥೆಯ ಕಾರ್ಯಕ್ಷಮತೆ ಮತ್ತು ವಿಶ್ವಾಸಾರ್ಹತೆ ಕುರಿತು ಅಗತ್ಯ ಆತ್ಮವಿಶ್ವಾಸ ದೊರೆತಿದೆ ಎಂದು ಇಸ್ರೋ ಹೇಳಿದೆ.

<><><>

ಬ್ರಿಕ್ಸ್ ಮಹಿಳಾ ಸಚಿವ ಮಟ್ಟದ ಸಭೆಯು ಇಂದು ಕೊಚ್ಚಿಯಲ್ಲಿ ಮುಕ್ತಾಯಗೊಳ್ಳಲಿದೆ. ಬ್ರಿಕ್ಸ್ ಮಹಿಳಾ ಸಚಿವ ಮಟ್ಟದ ಸಭೆಯ ಅಂಗವಾಗಿ ವಿವಿಧ ದೇಶಗಳ ಸಚಿವರು ನಿನ್ನೆ ಕರಡು ನಿರ್ಣಯದ ಕುರಿತು ಚರ್ಚೆ ನಡೆಸಿದರು. ಭಾರತದ ೨೦೨೬ರ ಬ್ರಿಕ್ಸ್ ಅಧ್ಯಕ್ಷತೆಯಡಿಯಲ್ಲಿ, ಪಂಚಾಯತ್ ರಾಜ್ ಸಚಿವಾಲಯವು ಕೊಚ್ಚಿಯಲ್ಲಿ ಈ ಸಭೆಯನ್ನು ಆಯೋಜಿಸಿದೆ. ಸಚಿವ ಮಟ್ಟದ ಸಭೆಗೂ ಮುನ್ನ, ಮಹಿಳಾ ಸಬಲೀಕರಣ ಮತ್ತು ಮಹಿಳಾ ನೇತೃತ್ವದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ಬ್ರಿಕ್ಸ್ ಮಹಿಳಾ ಕಾರ್ಯನಿರತ ಗುಂಪಿನ ಸಭೆಯನ್ನು ಕೊಚ್ಚಿಯಲ್ಲಿ ನಡೆಸಲಾಗಿತ್ತು. ಸಚಿವ ಮಟ್ಟದ ಸಭೆಯ ಜಂಟಿ ನಿರ್ಣಯವನ್ನು ಇಂದು ಸಂಜೆ ಅಂಗೀಕರಿಸುವ ನಿರೀಕ್ಷೆಯಿದೆ.

<><><>

ತಂಬಾಕು ಬೆಳೆಗಾರರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ಕನಿಷ್ಠ ಬೆಂಬಲ ಬೆಲೆಯಲ್ಲಿ ತಂಬಾಕು ಖರೀದಿ ಪ್ರಕ್ರಿಯೆಯನ್ನು ತಕ್ಷಣ ಆರಂಭಿಸುವಂತೆ ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಂಬಾಕು ಕಂಪನಿಗಳಿಗೆ ಸೂಚನೆ ನೀಡಿದ್ದಾರೆ. ಪ್ರತಿ ಕಿಲೋಗ್ರಾಂ ತಂಬಾಕಿನ ಬೆಲೆ ೧೦೦ ರೂಪಾಯಿಗಿಂತ ಕಡಿಮೆಯಾಗದಂತೆ ನೋಡಿಕೊಳ್ಳಬೇಕು ಹಾಗೂ ಹರಾಜು ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

<><><>

ಭಾರತದ ಅರ್ಣವ್ ಪಾಪರ್ಕರ್ ವಿಂಬಲ್ಡನ್ ಜೂನಿಯರ್ಸ್-೨೦೨೬ ಬಾಲಕರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ೩೬ ವರ್ಷಗಳ ಬಳಿಕದ ಮೊದಲ ಭಾರತೀಯ

ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪ್ರೀ ಕ್ವಾರ್ಟರ್‌ಫೈನಲ್‌ನಲ್ಲಿ ಅವರು ಜಪಾನ್‌ನ ರಿಯೋ ತಬಾಟಾ ಅವರನ್ನು ೭-೨, ೭-೧ ಅಂತರದಿಂದ ಮಣಿಸಿದರು.

<><><><>

ತಮಿಳುನಾಡಿನ ಕನ್ಯಾಕುಮಾರಿಯ ೧೭ ವರ್ಷದ ಅಶ್ವತ್ ಎಸ್, ಪುಣೆ ಅಂತಾರಾಷ್ಟ್ರೀಯ ಗ್ರ್ಯಾಂಡ್‌ಮಾಸ್ಟರ್ ರೌಂಡ್ ರಾಬಿನ್ ಚೆಸ್ ಪಂದ್ಯಾವಳಿಯಲ್ಲಿ ಅಂತಿಮ ಜಿಎಂ ನಾರ್ಮ್ ಸಾಧಿಸುವ ಮೂಲಕ ಭಾರತದ ೯೮ನೇ ಗ್ರ್ಯಾಂಡ್‌ಮಾಸ್ಟರ್ ಆಗಿದ್ದಾರೆ.

<><><><>

ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ-೨೦ ಸರಣಿಯ ನಾಲ್ಕನೇ ಪಂದ್ಯ ಇಂದು ಬ್ರಿಸ್ಟಲ್‌ನ ಕೌಂಟಿ ಮೈದಾನದಲ್ಲಿ ನಡೆಯಲಿದೆ. ಇಂದಿನ ಪಂದ್ಯದಲ್ಲಿ ಭಾರತ ಮತ್ತು ಇಂಗ್ಲೆಂಡ್ ತಂಡ ಮುಖಾಮುಖಿಯಾಗಲಿದ್ದು, ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೦ ಗಂಟೆಗೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>